# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **1334** |
| ಸದಸ್ಯರ ಹೆಸರು | : | ಶ್ರೀ ಪ್ರದೀಪ್ ಶೆಟ್ಟರ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16-03-2026 |
| ಉತ್ತರಿಸುವ ಸಚಿವರು | | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಧಾರವಾಡ ಜಿಲ್ಲೆ ಹಾಗೂ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಎಷ್ಟು: | ಹೆಸ್ಕಾಂ ವ್ಯಾಪ್ತಿಯ ಧಾರವಾಡ ಜಿಲ್ಲೆಯಲ್ಲಿ ಫೆಬ್ರುವರಿ-2026 ರ ಅಂತ್ಯಕ್ಕೆ ಒಟ್ಟು 20863 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಹಾಗೂ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಲ್ಲಿ 2117 ಸಂಖ್ಯೆಯ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಇರುತ್ತವೆ. |
| ಆ) | ಇದರಲ್ಲಿ ಎಷ್ಟು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು ಸುಸ್ಥಿತಿಯಲ್ಲಿವೆ ಹಾಗೂ ಎಷ್ಟು ವಿದ್ಯುತ್ ಟ್ರಾನ್ಸ್ ಫಾರ್ಮರ್ ಗಳು ದುರಸ್ಥಿಯಲ್ಲಿವೆ; ದುರಸ್ಥಿಯಲ್ಲಿರುವ ಟ್ರಾನ್ಸ್ ಫಾರ್ಮರ್‌ಗಳನ್ನು ಬದಲಾವಣೆ ಮಾಡುವ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು: | ಧಾರವಾಡ ಜಿಲ್ಲೆಯ (ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರ ಒಳಗೊಂಡಂತೆ) ಒಟ್ಟು 20863 ವಿದ್ಯುತ್ ಟ್ರಾನ್ಸ್ ಫಾರ್ಮರ್‌ಗಳು ಸುಸ್ಥಿತಿಯಲ್ಲಿರುತ್ತವೆ. ಒಂದು ವೇಳೆ ಟ್ರಾನ್ಸ್ ಫಾರ್ಮರ್‌ಗಳು ವಿಫಲಗೊಂಡಲ್ಲಿ ಅವುಗಳನ್ನು ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ದುರಸ್ಥಿ ಕೇಂದ್ರಗಳಲ್ಲಿ ಸಕಾಲದಲ್ಲಿ ದುರಸ್ಥಿ ಮಾಡಿ KERC ನಿಯಮಾನುಸಾರ 24 ಘಂಟೆಯೊಳಗೆ ಬದಲಾವಣೆ ಮಾಡಲಾಗುತ್ತದೆ. ವಿಫಲಗೊಂಡ ಪರಿವರ್ತಕಗಳನ್ನು ದುರಸ್ತಿಗೊಳಿಸಿ ತ್ವರಿತವಾಗಿ ಮರು ಬಳಕೆಗೆ ಅನುಕೂಲವಾಗುವಂತೆ, ಪರಿವರ್ತಕ ದುರಸ್ತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.<br>ಮುಂದುವರೆದು, ಬೇಡಿಕೆಗೆ ಅನುಗುಣವಾಗಿ ನಿಗಧಿತ ಕಾಲಾವಧಿಯಲ್ಲಿ ವಿದ್ಯುತ್ ಪರಿವರ್ತಕಗಳನ್ನು ವಿತರಣೆ ಮಾಡಲು ಉಗ್ರಾಣದಲ್ಲಿ ಸಾಕಷ್ಟು ಪರಿವರ್ತಕಗಳ ದಾಸ್ತಾನು ಇರಿಸಲಾಗಿದ್ದು ರೈತರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿರುತ್ತದೆ. |
| ಇ) | ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು: | ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಪೂರೈಸುವ ನಿಟ್ಟಿನಲ್ಲಿ ಕಾಲ ಕಾಲಕ್ಕೆ ವಿದ್ಯುತ್ ಭಾರದ ಅವಶ್ಯಕತೆಗೆ ಅನುಗುಣವಾಗಿ ರೈತರ ಪಂಪ್ ಸೆಟ್‌ಗಳಿಗೆ ಹಾಗೂ ಮನೆಗಳಿಗೆ/ವಸತಿ ಸಮುಚ್ಚಯಗಳಿಗೆ ಕಂಪನಿ ನಿಯಮಾವಳಿಗಳನ್ವಯ ಹಾಲಿ ಇರುವ ಪರಿವರ್ತಕ ಸಾಮರ್ಥ್ಯದ<br>ಆಧಾರದ ಮೇಲೆ ಮತ್ತು ತಾಂತ್ರಿಕ ಸಾಧ್ಯತೆಗನುಗುಣವಾಗಿ ಈ ಕೆಳಕಂಡ ಯೋಜನೆಗಳಡಿಯಲ್ಲಿ ಹೊಸದಾಗಿ ಅಥವಾ ಹೆಚ್ಚುವರಿ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗುತ್ತಿದೆ.<br>• SCSP/TSP ಯೋಜನೆಯಡಿ.<br>• ವ್ಯವಸ್ಥೆ ಸುಧಾರಣೆ ಯೋಜನೆಯಡಿ (System Improvement)<br>• ಬಂಡವಾಳ ವೆಚ್ಚ ಕಾಮಗಾರಿಗಳಡಿ ಹೊಸ ವಿದ್ಯುತ್ ಟ್ರಾನ್ಸ್ ಫಾರ್ಮರ್‌ಗಳ ಅಳವಡಿಕೆಯನ್ನು ಹಾಗೂ ಹಾಲಿಯಿರುವ ಪರಿವರ್ತಕಗಳ ಸಾಮರ್ಥ್ಯ ಹೆಚ್ಚಳವನ್ನು (Enhancement) ಮಾಡಲಾಗುತ್ತಿದೆ. |

<table>
<tr>
<td>ಈ)</td>
<td>ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಪಡೆಯಲು ಸರ್ಕಾರ ನಿಗದಿಪಡಿಸಿರುವ ಮೊತ್ತವೆಷ್ಟು; ಹಾಗೂ ಈ ಹಿಂದಿನ ಸರ್ಕಾರ ನಿಗದಿಪಡಿಸಿದ ಮೊತ್ತವೆಷ್ಟು? (ವಿವರ ನೀಡುವುದು)</td>
<td>ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಖರೀದಿಗಾಗಿ ಎಸ್ಕಾಂಗಳ ಸಾಮಾನ್ಯ ದರ ಪಟ್ಟಿಯಲ್ಲಿ ನಿಗದಿಪಡಿಸಿರುವ ಮೊತ್ತದ ವಿವರಗಳು ಈ ಕೆಳಕಂಡಂತಿವೆ:
<table>
<tr><th>ಪರಿವರ್ತಕ (KVA)</th><th>2021-22 ರ ದರಪಟ್ಟಿ (SR) ಪ್ರಕಾರ ಈ ಹಿಂದೆ ನಿಗದಿಪಡಿಸಿರುವ ಮೊತ್ತ (ರೂ.ಗಳಲ್ಲಿ)</th><th>ಹಾಲಿ ಚಾಲ್ತಿಯಲ್ಲಿರುವ 2023-24 ರ ದರಪಟ್ಟಿ (SR) ಪ್ರಕಾರ ನಿಗದಿಪಡಿಸಿರುವ ಮೊತ್ತ (ರೂ.ಗಳಲ್ಲಿ)</th></tr>
<tr><td>25</td><td>86731/-</td><td>105994/-</td></tr>
<tr><td>63</td><td>149370/-</td><td>182545/-</td></tr>
<tr><td>100</td><td>181616/-</td><td>221952/-</td></tr>
<tr><td>250</td><td>441102/-</td><td>539071/-</td></tr>
<tr><td>500</td><td>744746/-</td><td>910154/-</td></tr>
</table>
</td>
</tr>
</table>

**ಸಂಖ್ಯೆ: ಎನರ್ಜಿ 64 ಇಬಿಎಸ್ 2026**

**(ಕೆ.ಜೆ.ಜಾರ್ಜ್)**
ಇಂಧನ ಸಚಿವರು